# ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 29.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 455.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru, page No. 123.
4. **Note:** The lyrics given without highlights are as per Ref. 1 & Ref. 2. The wordings in Ref. 3 are almost same except few wordings which are given in yellow highlights. There are few differences in other stanzas which are very minor and are not considered here.
5. **Note:** The singer has followed the wordings in Ref. 1.

ರಾಗ: ಪೀಲೂ ತಾಳ: ಮಿಶ್ರ ಛಾಪು

ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ
ಕಪಟ ನಾಟಕ ಸೂತ್ರಧಾರಿ ನೀನೇ || ಪ ||

| | |
|---|---|
| ನೀನೇ ಆಡಿಸದಿರಲು ಜಡ ಒನಕೆಯ ಬೊಂಬೆ | (ನೀನೇ ಆಡಿಸದಿರಲು ಜಡ ಒನಕೆ ಅಭಿನಯ ಬೊಂಬೆ |
| ಏನು ಮಾಡಲು ಬಲ್ಲುದು ತಾನೆ ಬೇರೆ | ಏನು ಬಲ್ಲುದು ಬೇರೆ ಕೃತಿಯನೊಂದ |
| ನೀನಿಟ್ಟ ಸೂತ್ರದಿಂ ಚಲಿಪವು ಕೈ ಕಾಲುಗಳು | ನೀನಿಟ್ಟ ಸೂತ್ರದಿಂದಲುಗೆ ಕೈ ಕಾಲುಗಳು |
| ನೀನೇ ಮುಗ್ಗಿಸಲು ಮುಗ್ಗುವ ದೇಹದವನು \|\| 1 \|\| | ನೀನೆ ಮಗ್ಗಿಸಲು ಮಗ್ಗುವ ದೇಹ ತಾನಾಗೆ) |

| | |
|---|---|
| ಒಂದೆಂಟು ಬಾಗಿಲ ಪಟ್ಟಣಕ್ಕೆ ತನ್ನ- | |
| ದೆಂದು ಇಪ್ಪತ್ತಾರು ಮನೆಯಾಳ್ಗಳ | |
| ತಂದು ಕಾವಲ ನಿಲಿಸಿ ಎನ್ನ ನೀ ಒಳಗಿಟ್ಟು | |
| ಮುಂದೆ ಭವದಲಿ ಭವಣಿಪುದನ್ಯಾಯ \|\| 2 \|\| | (ಭವ ಭವದಿ ಭವಣಿಪುದನ್ಯಾಯ) |

ಯಂತ್ರ ವಾಹಕ ನೀನೇ ಒಳಗಿದ್ದು ಎನ್ನ ಸ್ವ-
ತಂತ್ರನೆಂದೆನಿಸಿ ಕೊಲಿಸುವರೆ ಹೇಳೊ
ಕಂತುಪಿತ ಲಕ್ಷ್ಮೀಶ ಎಂತಾಡದಂತಹುದಾ-
ನಂತ ಮೂರುತಿ ನಮ್ಮ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ತಾನೆ ಬೇರೆ** – ಸ್ವಾತಂತ್ರ್ಯದಿಂದ.

**ನೀನಿಟ್ಟ ಸೂತ್ರದಿಂ** – ಪ್ರೇರಕ, ನಿಯಾಮಕ, ಸಾಕ್ಷಿಕ ಎಂಬ ಬಿಂಬರೂಪೀ ಪರಮಾತ್ಮನ ದ್ರವ್ಯ, ಗುಣ, ಕ್ರಿಯಾ ಪ್ರಕಾರಗಳು. ವಿವರಣೆಗೆ ಪ್ರಸ್ತಾವನೆ ನೋಡಿ.

**ಜಡ ಒನಕೆ** = ನಿರ್ಜೀವವಾದ ಜಡ ವಸ್ತು

**ಒಂದೆಂಟು** = ಒಂಬತ್ತು

**ಒಂದೆಂಟು ಬಾಗಿಲ ಪಟ್ಟಣಕೆ** – 'ನವದ್ವಾರೇ ಪುರೇ ದೇಹೀ', ಒಂಬತ್ತು ಬಾಗಿಲುಗಳುಳ್ಳ ದೇಹ; ವಿವರಣೆ ಆಗಲೆ ಬಂದಿದೆ.

**ಇಪ್ಪತ್ತಾರು ಮನೆಯಾಳುಗಳು** – ತತ್ತ್ವಾಭಿಮಾನಿ ದೇವತೆಗಳು; ತಾರತಮ್ಯ ಸೋತ್ರದ ಪ್ರಸ್ತಾವನೆ ನೋಡಿ.

**ಎನ್ನನೀ ಒಳಗಿಟ್ಟು** – ಹೃದಯ ಕಮಲದಲ್ಲಿ, ಬಿಂಬನೊಂದಿಗೆ.

**ಭವಣಿಪುದು** – ಬವಣೆಗೊಳಿಸುವುದು.

**ಯಂತ್ರವಾಹಕ** – ಬದುಕೆಂಬ ಯಂತ್ರವನ್ನು ನಡೆಸುವವನು ಬಿಂಬರೂಪಿ.

**ಎನ್ನ ಸ್ವತಂತ್ರನೆಂದೆನಿಸಿ** – ದತ್ತಸ್ವಾತಂತ್ರ್ಯವೆಂಬ ಕಲ್ಪನೆ. ಜೀವನು ತನ್ನ ದೇಹೇಂದ್ರಿಯ ಮನಸ್ಸುಗಳಿಂದ ಕೆಲಸಮಾಡಲು (ಕರ್ತೃತ್ವ), ಅದರ ಫಲಗಳನ್ನು ಅನುಭವಿಸಲು (ಭೋಕ್ತೃತ್ವ) ಪರಮಾತ್ಮನೇ ತನ್ನ ಸಂಕಲ್ಪಾನುಸಾರ, ಜೀವನ ಸ್ವರೂಪ–ಯೋಗ್ಯತಾನುಸಾರ ಸ್ವಾತಂತ್ರ್ಯವನ್ನು ಕೊಡುತ್ತಾನೆ.

**ಕೃತಿ** = ಚಲನವಲನ, ವ್ಯವಹಾರ

**ಮಗ್ಗಿಸು** = ಕೆಳಗೆ ಚೆಲ್ಲು

**ಭವ ಭವದಿ** = ಜನ್ಮ ಜನ್ಮಗಳಲ್ಲಿ

**ನೀನೆ ಒಳಗೆ ಇದ್ದು** = ಬಿಂಬ ಸ್ವರೂಪಿಯಾಗಿದ್ದು

**ಎಂತಾಡದಂತಹುದು** = ಹೇಗೆ ಆಗಬೇಕೆನ್ನುತ್ತಾನೆ ಹಾಗೆ ಆಗುತ್ತದೆ

**Classification:** Mundige
**Ankita:** purandara vittala
**Location:** NA
**Category:** Tatva Jnana, Artha Bhava.
**Sub-Category:** aparadhi, Ata, kai, deha, bagilu, mane, bhava, Vishnu,
**Pravachana:** NA
**Explanation:** Dr. Vijayendra Desai